


بسم اللهِ الرّحمٰنِ الرّحيم

# ತಹ್‌ರೀಕ್ ಜದೀದ್ – 2024

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–11–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ اِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಸೂರಃ ಬಖರಃದ 275ನೇ ವಚನವನ್ನು ಪಠಿಸಿದರು. ಅದರ ಅರ್ಥ ಹೀಗಿದೆ:)*

ಅಲ್ಲಾಹನ ಮಾರ್ಗದಲ್ಲಿ ರಾತ್ರಿಯಲ್ಲೂ ಹಗಲಿನಲ್ಲೂ ಗೋಪ್ಯವಾಗಿಯೂ ಬಹಿರಂಗವಾಗಿಯೂ ತಮ್ಮ ಧನವನ್ನು ವ್ಯಯಮಾಡುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು; ಅವರು ದುಃಖಿತರೂ ಆಗಲಾರರು. (2:275).

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಅಲ್ಲಾಹನ ಈ ನಿರ್ದೇಶನ ಪ್ರಕಾರ ಧನತ್ಯಾಗಗಳಲ್ಲಿ ಬಹಳ ಉತ್ಸಾಹದಿಂದ ಭಾಗಿಯಾಗುತ್ತದೆ. ಜಮಾಅತಿನ ಅನೇಕ ಚಂದಾಗಳು ಇವೆ. ಆಮ್ ಚಂದಾ, ಚಂದಾ ವಸಿಯ್ಯತ್ ಮೊದಲಾದ ಕಡ್ಡಾಯ ಚಂದಾ, ಇದಲ್ಲದೆ ತಹ್ರೀಕ್ ಜದೀದ್, ವಖ್ಫೇ ಜದೀದಿನ ಯೋಜನೆಗಳು ಇತ್ಯಾದಿ. ಅಗತ್ಯ ಬರುವಾಗ ಎಲ್ಲೆಡೆ ಅಹ್ಮದಿಯಾ ಜಮಾಅತಿನ ಸದಸ್ಯರು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಧನತ್ಯಾಗಗಳಲ್ಲಿ ಭಾಗವಹಿಸುತ್ತಾರೆ. ರಹಸ್ಯವಾಗಿಯೂ ಬಹಿರಂಗವಾಗಿಯೂ ತ್ಯಾಗಗಳನ್ನು ಮಾಡುತ್ತಿರುತ್ತಾರೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಬಹುದೋ ಎಂಬ ಭಯ ಅವರಿಗೆ ಇರುವುದಿಲ್ಲ.

ಅಹ್ಮದಿಯಾ ಜಮಾಅತಿನ ಹೆಚ್ಚಿನವರು ಕಡಿಮೆ ಆದಾಯ ಅಥವಾ ಮಧ್ಯಮ ಆದಾಯದವರು ಆಗಿದ್ದಾರೆ. ಆದರೆ ಅಸಾಧಾರಣವಾದ ಧನತ್ಯಾಗವನ್ನು ಮಾಡುವ ಜನರೂ ಇದ್ದಾರೆ. ಅಹ್ಮದಿಯಾ ಜಮಾಅತ್ ಅನೇಕ ಯೋಜನೆಗಳನ್ನು ಆರಂಭಿಸಿದೆ, ನಮ್ಮ ಆದಾಯ ಪರಿಮಿತವಾದುದಾಗಿದೆ, ಎಲ್ಲಿಂದ ನೀಡುವುದು ಎಂದು ಅವರು ಯಾವತ್ತೂ ಹೇಳುವುದಿಲ್ಲ. ಬದಲಾಗಿ ಮನಸ್ಸಾರೆ ಆವೇಶ ಮತ್ತು ಉತ್ಸಾಹದಿಂದ ಈ ತ್ಯಾಗಗಳನ್ನು ಮಾಡುತ್ತಾರೆ. ಬಹಳ ದೊಡ್ಡ ತ್ಯಾಗವನ್ನು ಮಾಡಿಕೊಂಡು ಕೂಡ ಅಥವಾ ತಮ್ಮ ವೈಯಕ್ತಿಕ ಖರ್ಚನ್ನು ಕಡಿತಗೊಳಿಸಿ, ತಮ್ಮ ಆಹಾರವನ್ನು ಕಡಿಮೆಗೊಳಿಸಿ, ತಮ್ಮ ಮಕ್ಕಳ ಖರ್ಚನ್ನು ಕಡಿಮೆಗೊಳಿಸಿ ತ್ಯಾಗಗಳನ್ನು ಮಾಡಿಕೊಂಡು ಕೂಡ ನಾವು ಇಷ್ಟೆಲ್ಲ ತ್ಯಾಗಗಳನ್ನು ಮಾಡುತ್ತಿದ್ದೇವೆ, ನಮ್ಮ ಮೇಲೆ ಇಷ್ಟು ಭಾರವನ್ನು ಏಕೆ ಹೊರಿಸಲಾಗುತ್ತಿದೆ? ಮತ್ತು ನಮಗೂ ನಮ್ಮ ಆವಶ್ಯಕತೆಗಳನ್ನು ಪೂರೈಸಲು ಹಣದ ಅಗತ್ಯವಿದೆ ಎಂಬ ಮಾತು ಅಥವಾ ಚಿಂತೆ ಬರದ ಕೆಲವು ಜನರ ಬಗ್ಗೆ ನನಗೆ ಗೊತ್ತಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ತಹ್ರೀಕ್ ಜದೀದಿನ ಯೋಜನೆಯನ್ನು ಜಾರಿಗೊಳಿಸಿದಾಗ ಸರಳ ಜೀವನವನ್ನು ಸಾಗಿಸಲು ಅವರು ಮನವಿ ಮಾಡಿದ್ದರು. ಸರಳ ಜೀವನವನ್ನು ಸಾಗಿಸಿ ಹಣವನ್ನು ಕೂಡಿಟ್ಟುಕೊಳ್ಳಿರಿ ಮತ್ತು ಅದರ ಪ್ರಕಾರ ಖರ್ಚು ಮಾಡಿರಿ ಎಂದು ಅವರು ಹೇಳಿದ್ದರು. ಇದರ ಪರಿಣಾಮವಾಗಿ ಕೆಲವು ಜನರು ಸ್ವತಃ ಅತ್ಯಂತ ಸರಳ ಜೀವನವನ್ನು ಸಾಗಿಸುತ್ತಾರೆ ಮತ್ತು ಬಹಳಷ್ಟು ಹಣವನ್ನು ನೀಡುತ್ತಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹಣವನ್ನು ನೀಡಲು ಅವರಿಗೆ ಸಾಧ್ಯವಲ್ಲವೆಂದು ಅವರ ಸ್ಥಿತಿಯನ್ನು ಬಾಹ್ಯವಾಗಿ ನೋಡುವಾಗ ಅನಿಸುತ್ತದೆ. ಆದರೆ ಅವರು ಸಾವಿರಾರು ಡಾಲರ್‌ಗಳ, ಪೌಂಡ್‌ಗಳ, ಯೂರೋಗಳ ಧನತ್ಯಾಗವನ್ನು ಮಾಡುತ್ತಾರೆ. ಈ ಭೌತಿಕ ಲೋಕದಲ್ಲಿ, ಈ ದೇಶಗಳಲ್ಲಿ ಇದ್ದುಕೊಂಡು ಇಷ್ಟು ದೊಡ್ಡ ತ್ಯಾಗವನ್ನು ಮಾಡುವುದು ಬಹಳ ದೊಡ್ಡ ತ್ಯಾಗವಾಗಿದೆ. ಅದೇ ರೀತಿಯಲ್ಲಿ ಬಡ ದೇಶಗಳಾದ ಪಾಕಿಸ್ತಾನ, ಭಾರತ ಅಥವಾ ಆಫ್ರಿಕದ ದೇಶಗಳ ಅಹ್ಮದಿಯರ ಆದಾಯ ಬಹಳ ಕಡಿಮೆ ಮತ್ತು ಬಹಳ ಕಷ್ಟದಿಂದ ಜನರು ಜೀವನ ಸಾಗಿಸುತ್ತಾರೆ. ಆದರೂ ಅವರು ತ್ಯಾಗಗಳನ್ನು ಮಾಡುತ್ತಾ ಹೋಗುತ್ತಾರೆ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ರಹಸ್ಯವಾಗಿಯೂ ಬಹಿರಂಗವಾಗಿಯೂ ಅವರು ಖರ್ಚು ಮಾಡುತ್ತಾರೆ. ಒಟ್ಟಿನಲ್ಲಿ ಈ ಜನರೇ ಯಥಾರ್ಥ ಸತ್ಯವಿಶ್ವಾಸಿಗಳು ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವವರು ಆಗಿರುತ್ತಾರೆ. ಧನತ್ಯಾಗದ ಯಾವುದಾದರೂ ಯೋಜನೆಯನ್ನು ಮುಂದಿರಿಸಲಾಗುವಾಗ ಅಥವಾ ತಹ್ರೀಕ್ ಜದೀದ್ ಅಥವಾ ವಖ್ಫೇ ಜದೀದಿನ ಘೋಷಣೆ ಮಾಡಲಾಗುವಾಗ ಕೆಲವು ಜನರು ಸಾಲ ಮಾಡಿಯಾದರೂ ಹಣವನ್ನು ಪಾವತಿ ಮಾಡುತ್ತಾರೆ. ಸಾಲವನ್ನು ಪಡೆದು ಸಂದಾಯ ಮಾಡಬೇಕಾದ ಅಗತ್ಯವೇನಿಲ್ಲವಾದರೂ ಅವರು ಹಾಗೆ ಮಾಡುತ್ತಾರೆ. ಅವರಿಗೆ ಯಾವುದೇ ಭಯವಿರುವುದಿಲ್ಲ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಿರುವಾಗ ಅಲ್ಲಾಹನೇ ಭರ್ತಿ ಮಾಡಿಕೊಡುವವನು ಎಂದು ಅವರಿಗೆ ಗೊತ್ತಿರುತ್ತದೆ.

ಒಟ್ಟಿನಲ್ಲಿ ಅಹ್ಮದಿಯಾ ಜಮಾಅತಿಗೆ ಅಲ್ಲಾಹನು ಅನೇಕ ಶ್ರೇಷ್ಠ ತ್ಯಾಗಶಾಲಿಗಳನ್ನು ದಯಪಾಲಿಸಿದ್ದಾನೆ. ಅವರು ಅನ್ಯರ ಹಾಗೆ ಐದು, ಹತ್ತು ರೂಪಾಯಿಗಳನ್ನು ನೀಡಿ ನೂರು ಬಾರಿ ಮಸೀದಿಯಲ್ಲಿ ಘೋಷಣೆ ಮಾಡಿಸುವವರಲ್ಲ. ಬಹಳಷ್ಟು ತ್ಯಾಗಗಳನ್ನು ಮಾಡಲು ಸ್ವತಃ ಮುಂದೆ ಬರುವ ಅನೇಕ

ಘಟನೆಗಳ ವಿವರ ನನ್ನ ಮುಂದೆ ಬರುತ್ತದೆ. ಅದರಲ್ಲಿ ಆಫ್ರಿಕದ ದೇಶಗಳು, ಯುರೋಪಿನ ದೇಶಗಳು, ಏಶಿಯದ ದೇಶಗಳು ಕೂಡ ಇವೆ. ಬಡ ಜನರು ಬಹಳ ದೊಡ್ಡ ತ್ಯಾಗವನ್ನು ಮಾಡಿಕೊಂಡು ಚಂದಾ ನೀಡುತ್ತಾರೆ. ಬಾಹ್ಯವಾಗಿ ಅವರ ತ್ಯಾಗಗಳು ಹಣದ ದೃಷ್ಟಿಯಲ್ಲಿ ಬಹಳ ಕಡಿಮೆಯಾದರೂ ಭಾರದ ಮಟ್ಟದಲ್ಲಿ ಅಲ್ಲಾಹನ ದೃಷ್ಟಿಯಲ್ಲಿ ಅವು ಬಹಳ ದೊಡ್ಡ ತ್ಯಾಗಗಳಾಗಿವೆ. ಧನತ್ಯಾಗಗಳನ್ನು ಮಾಡುವ ಮೂಲಕ ಅಲ್ಲಾಹನ ಸಂಪ್ರೀತಿ ಲಭಿಸುವುದರ ಜೊತೆಗೆ ಅಲ್ಲಾಹನು ಅವರಿಂದ ಎಲ್ಲ ವಿಧದ ಭಯವನ್ನು ಕೂಡ ದೂರ ಮಾಡುತ್ತಾನೆ ಮತ್ತು ಅವರ ಆವಶ್ಯಕತೆಗಳನ್ನು ಪೂರೈಸಿಕೊಡುತ್ತಾನೆ ಎಂಬ ದೃಢವಿಶ್ವಾಸ ದೂರ ದೂರದ ಬಡ ದೇಶಗಳ ಜನರಲ್ಲೂ ಇವೆ.

ಉದಾಹರಣೆಗೆ, ಜರ್ಮನಿಯ ರೋಡ್‌ಗಾವ್ ಜಮಾಅತಿನ ಸದರ್ ಸಾಹಿಬ್ ಹೇಳುತ್ತಾರೆ: ಕೆಲವು ವಖ್ಫೇ ಝಿಂದಗಿಯರು ತಮ್ಮ ಒಂದು ತಿಂಗಳ ವೇತನವನ್ನು ಜಮಾಅತಿಗೆ ನೀಡುವುದಾಗಿ ಹೇಳಿದರು. ಇದು ಇತರ ಸದಸ್ಯರನ್ನು ಸಹ ದೊಡ್ಡ ತ್ಯಾಗಗಳನ್ನು ಮಾಡಲು ಹುರಿದುಂಬಿಸಿತು. ಒಬ್ಬ ಸಹೋದರ ಇದರಿಂದ ಪ್ರೇರಣೆ ಪಡೆದು ದೊಡ್ಡ ರೊಕ್ಕವನ್ನು ಚಂದಾ ಆಗಿ ನೀಡಿದರು ಮತ್ತು ಬರುವ ವರ್ಷಕ್ಕಾಗಿ ತಮ್ಮ ವಾಗ್ದಾನವನ್ನು ಇಮ್ಮಡಿಗಿಂತಲೂ ಹೆಚ್ಚುಗೊಳಿಸಿದರು. ಈ ತ್ಯಾಗ ಮನೋಭಾವವು ಅವರ ಜೀವಿತದಲ್ಲಿ ಸರಳತೆ ಮತ್ತು ಇದ್ದುದರಲ್ಲಿ ತೃಪ್ತಿಪಡುವ ಗುಣವನ್ನು ತುಂಬಿಸಿತು. ಅವರು ಸರಳ ಉಡಿಗೆ ಮತ್ತು ಸರಳ ಜೀವಿತವನ್ನು ಸ್ವೀಕಾರ ಮಾಡಿಕೊಂಡರು. ಅವರ ಬಾಹ್ಯವಾದ ಸ್ಥಿತಿಯನ್ನು ನೋಡುವಾಗ ಅವರು ಇಷ್ಟು ದೊಡ್ಡ ಧನತ್ಯಾಗವನ್ನು ಮಾಡಬಲ್ಲರು ಎಂದು ಅಂದಾಜು ಮಾಡಲು ಆಗುವುದಿಲ್ಲ.

ಇದರಿಂದ ನನಗೆ ಒಂದು ಹಳೆಯ ಘಟನೆ ನೆನಪಿಗೆ ಬರುತ್ತಿದೆ. ಕರಾಚಿಯಲ್ಲಿ ನಮ್ಮ ಒಬ್ಬ ಹಿರಿಯ ಸೋದರರನಾದ ಶೇಖ್ ಮಜೀದ್ ಸಾಹಿಬ್ ಇದ್ದರು. ಅವರು ಹಿರಿದಾದ ಧನತ್ಯಾಗಗಳನ್ನು ಮಾಡುತ್ತಿದ್ದರು. ತಮ್ಮ ಮನೆಯ ಖರ್ಚಿಗಾಗಿ ಹಣವನ್ನು ಇಟ್ಟು ಉಳಿದ ಹಣದಿಂದ ಎಲ್ಲ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ನಾನು ಮಾಡುತ್ತಿರುವ ವ್ಯಾಪಾರವೇ ಜಮಾಅತಿಗಾಗಿ ಆಗಿದೆ ಎಂದು ಅವರು ಹೇಳುತ್ತಿದ್ದರು.

ಖಾದಿಯಾನಿನ ವಕೀಲುಲ್ ಮಾಲ್ ಬರೆಯುತ್ತಾರೆ: ಕೇರಳದ ಒಬ್ಬ ಸಹೋದರ ಹೀಗೆ ಹೇಳುತ್ತಾರೆ: ನನ್ನದು ಬಹಳ ಹೀನಾಯ ಸ್ಥಿತಿಯಾಗಿತ್ತು. ನನಗೆ ಯಾವುದೇ ಕೆಲಸ ಲಭಿಸುತ್ತಿರಲಿಲ್ಲ. ಏನಿಲ್ಲವೆಂದರೆ ಬಟ್ಟೆಯ ಮಾರಾಟ ಮಾಡುವ ಕೆಲಸವನ್ನಾದರೂ ಮಾಡುತ್ತೇನೆ ಎಂದು ಯೋಚಿಸಿ ಫುಟ್‌ಪಾತಿನಲ್ಲೇ ಒಂದು ಮೇಜು ಹಾಕಿ ಕೆಲಸ ಆರಂಭಿಸಿದೆ ಮತ್ತು ಚಂದಾವನ್ನು ಸರಿಯಾಗಿ ಪಾವತಿ ಮಾಡಲು ಶುರುಮಾಡಿದೆ. ಬರುವ ಆದಾಯದಲ್ಲಿ ಅಲ್ಲಾಹನ ಕೃಪೆಯಿಂದ ಅನುಗ್ರಹ ಉಂಟಾಯಿತು. ಈಗ ನಾನು ದೊಡ್ಡ ಸಂಖ್ಯೆಯಲ್ಲಿ ಚಂದಾವನ್ನು ನೀಡುತ್ತಿದ್ದೇನೆ. ಎರಡು ಮೂರು ವರ್ಷಗಳಲ್ಲಿ ವ್ಯಾಪಾರ ಸಹ ವಿಸ್ತಾರಗೊಂಡಿತು. ಅಲ್ಲಾಹನ ಮಾರ್ಗದಲ್ಲಿ ನಾನು ನಿಯತವಾಗಿ ಮಾಡುತ್ತಿದ್ದ ಚಂದಾದ ತ್ಯಾಗದ ಕಾರಣದಿಂದಲೇ ನನ್ನ ವ್ಯಾಪಾರದಲ್ಲಿ ಅನುಗ್ರಹ ಉಂಟಾಯಿತು. ಸ್ಥಿತಿಗತಿಗಳ ಕಾರಣದಿಂದ ಇತರ ಜನರ ಆರ್ಥಿಕ ಸ್ಥಿತಿಗಳು ಕೆಟ್ಟು ಹೋಗುತ್ತಿತ್ತು. ಆದರೆ ನನಗೆ ಲಾಭವೇ ಆಗುತ್ತಿತ್ತು. ಈಗ ಅವರಿಗೆ ಸ್ವಂತವಾಗಿ ದೊಡ್ಡ ದೊಡ್ಡ ಅಂಗಡಿಗಳು ಇವೆ. ಫುಟ್‌ಪಾತಿನಲ್ಲಿ ಒಂದು ಮೇಜನ್ನು ಹಾಕಿ ವ್ಯಾಪಾರ ಮಾಡುತ್ತಿದ್ದ ವ್ಯಕ್ತಿಗೆ ಈಗ ದೊಡ್ಡ ದೊಡ್ಡ ಅಂಗಡಿಗಳು ಮತ್ತು ಶೋರೂಮ್ ಕೂಡ ಇವೆ. ಅಲ್ಲಾಹನ ಅನುಗ್ರಹದಿಂದ ಈಗ ಲಕ್ಷಗಟ್ಟಲೆ ಹಣವನ್ನು ಚಂದಾ ಆಗಿ ನೀಡುತ್ತಿದ್ದಾರೆ. ಈ ವರ್ಷ ಅವರು ತಹ್ರೀಕ್ ಜದೀದ್‌ಗಾಗಿ ಹತ್ತು ಲಕ್ಷ ರೂಪಾಯಿ ಚಂದಾ ನೀಡಿದರು.

ಈಗ ಇದು ಬಡ ದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ವಿಶ್ವಾಸದಲ್ಲಿ ದೃಢತೆ ಇರುವವರು ಎಲ್ಲೆಡೆ ಇಂತಹ ದೃಶ್ಯಗಳನ್ನು ನೋಡುತ್ತಾರೆ. ಸದುದ್ದೇಶದಿಂದ ಅಲ್ಲಾಹನಿಗಾಗಿ ತ್ಯಾಗ ಮಾಡಲು ಬಯಸುವವರು ಮತ್ತು ತ್ಯಾಗ ಮಾಡುವವರು ಇಂತಹ ದೃಶ್ಯಗಳನ್ನು ಕಾಣುತ್ತಾರೆ. ಶ್ರೀಮಂತ ದೇಶಗಳಲ್ಲಿ ಇರುವ ಜನರಿಗೂ ಬಡ ದೇಶಗಳಲ್ಲಿ ಇರುವ ಜನರಿಗೂ ಅಲ್ಲಾಹನು ಇಂತಹ ದೃಶ್ಯಗಳನ್ನು ತೋರಿಸಿ ಅವರಿಗೆ ಅವರ ದೀನಿನಲ್ಲಿ ದೃಢತೆ ಉಂಟಾಗುವಂತೆ ಮಾಡುತ್ತಾನೆ. ಅವರ ವಿಶ್ವಾಸವನ್ನು ಸುದೃಢಗೊಳಿಸುತ್ತಾನೆ. ಜನರ ವಿಶ್ವಾಸವನ್ನು ಸುದೃಢಗೊಳಿಸಲಿಕ್ಕಾಗಿ ಅಲ್ಲಾಹನು ತೋರಿಸುವ ಇಂತಹ ಅನೇಕ ಘಟನೆಗಳು ಇವೆ. ಅನಂತರ ಇದನ್ನು ನೋಡಿ ಇತರರಿಗೂ ಅದರ ಬಗ್ಗೆ ಗೊತ್ತಾಗುವಾಗ ಅವರಲ್ಲೂ ತ್ಯಾಗದ ಮನೋಭಾವ ಉಂಟಾಗುತ್ತದೆ.

(ಅನಂತರ ಹುಝೂರ್ ಕಳೆದ ವರ್ಷದ ಅಂಕಿಅಂಶ ಮತ್ತು ತಹ್ರೀಕ್ ಜದೀದಿನ ಹೊಸ ವರ್ಷದ ಘೋಷಣೆ ಮಾಡಿದರು.)

(ತೊಂಬತ್ತನೇ ವರ್ಷದ ಅಂಕಿಅಂಶವನ್ನು ವಿವರಿಸುತ್ತಾ ಹುಝೂರ್ ಹೇಳಿದರು:) ಅಲ್ಲಾಹನ ಅನುಗ್ರಹದಿಂದ ಜಮಾಅತಿಗೆ 17.98 ಮಿಲಿಯನ್ ಪೌಂಡಿನ ತ್ಯಾಗವನ್ನು ಮಾಡಲು ಸೌಭಾಗ್ಯ ಲಭಿಸಿತು – ಅಲ್‌ಹಮ್ದುಲಿಲ್ಲಾಹ್. ಇದು ಕಳೆದ ವರ್ಷಕ್ಕಿಂತ 7 ಲಕ್ಷ 79 ಸಾವಿರ ಪೌಂಡ್‌ನಷ್ಟು ಹೆಚ್ಚು ಆಗಿದೆ. ಒಟ್ಟು ವಸೂಲಿಯ ಪ್ರಕಾರ ಮೊದಲ ಹತ್ತು ರಾಷ್ಟ್ರಗಳು: ಜರ್ಮನಿ, ಬ್ರಿಟನ್, ಅಮೇರಿಕ, ಕೆನಡ, ಮಿಡಲ್ ಈಸ್ಟಿನ ಒಂದು ದೇಶ, ಭಾರತ, ಆಸ್ಟ್ರೇಲಿಯ, ಇಂಡೋನೇಶ್ಯ, ಮಿಡಲ್ ಈಸ್ಟಿನ ಒಂದು ದೇಶ, ಘಾನ.

ತಲಾ ಪಾವತಿಯ ಪ್ರಕಾರ: ಅಮೇರಿಕ, ಸ್ವಿಝರ್‌ಲ್ಯಾಂಡ್, ಬ್ರಿಟನ್, ಕೆನಡ, ಆಸ್ಟ್ರೇಲಿಯ.

ಪ್ರಸ್ತಾಪಯೋಗ್ಯ ಇತರ ಜಮಾಅತುಗಳು: ಬಾಂಗ್ಲದೇಶ, ನೈಜೀರಿಯ, ಹಾಲೇಂಡ್, ಆಸ್ಟ್ರಿಯ, ಫ್ರಾನ್ಸ್,

ಸ್ವೀಝರ್ಲ್ಯಾಂಡ್, ಐರ್ಲೇಂಡ್, ಮಿಡಲ್ ಈಸ್ಟಿನ ಒಂದು ಜಮಾಅತ್ ಆಗಿವೆ. (ಬಾಂಗ್ಲಾದೇಶದ ಜಮಾಅತಿಗಾಗಿ ದುಆ ಮಾಡಲು ಸಹ ಈ ಸಂದರ್ಭದಲ್ಲಿ ಹುಝೂರ್ ಹೇಳಿದರು.)

ತಹ್ರೀಕ್ ಜದೀದ್‌ನಲ್ಲಿ ಪಾಲ್ಗೊಂಡಿರುವವರ ಒಟ್ಟು ಸಂಖ್ಯೆ 16 ಲಕ್ಷ, 81 ಸಾವಿರ ಆಗಿದೆ. ತ್ಯಾಗ ಮಾಡಿದವರ ಸಂಖ್ಯೆಯಲ್ಲಿ ಕಳೆದ ವರ್ಷಕ್ಕಿಂತ ಒಟ್ಟು 50 ಸಾವಿರ ಜನರ ವರ್ಧನೆ ಉಂಟಾಗಿದೆ. ವರ್ಧನೆ ಉಂಟುಮಾಡಿದವರಲ್ಲಿ ಪ್ರಸ್ತಾಪಾರ್ಹ ಜಮಾಅತುಗಳು ಹೀಗಿವೆ: ನೈಜೀರಿಯ, ಕಾಂಗೋ, ಬರಾಝ್ಝಾವೇಲ್, ನೈಜರ್, ಗಾಂಬಿಯ, ಕಾಂಗೋಕನ್ಸ್ಯಾಸಾ, ಕೇಮರೂನ್, ಗಿನಿಕನಾಕರಿ, ಗಿನಿಬಸಾವ್, ಯುಗಾಂಡ, ಸಿರಾಲಿಯೋನ್.

ಭಾರತದ ಹತ್ತು ರಾಜ್ಯಗಳು ಹೀಗಿವೆ: ಕೇರಳ, ತಮಿಳುನಾಡು, ತೆಲಂಗಾನ, ಒಡಿಶಾ, ಕರ್ನಾಟಕ, ಜಮ್ಮು ಕಾಶ್ಮೀರ, ಪಂಜಾಬ್, ಬಂಗಾಳ, ಮಹಾರಾಷ್ಟ್ರ ಮತ್ತು ದೆಹಲಿ. ಭಾರತದ ಹತ್ತು ಜಮಾಅತುಗಳು ಹೀಗಿವೆ: ಹೈದರಾಬಾದ್, ಖಾದಿಯಾನ್, ಕಾಲಿಕಟ್, ಕೋಯಂಬತ್ತೂರ್, ಮಂಜೇರಿ, ಮೇಲಪಾಳಯಂ, ಬೆಂಗಳೂರು, ಕಲ್ಕತ್ತ, ಕೇರಂಗ್, ಕರುಳಾಯಿ.

(ಹಝ್ರತ್ ಮಸೀಹ್ ಮೌಊದ್[ಅ]ರ ಒಂದು ಉಲ್ಲೇಖವನ್ನು ಮುಂದಿರಿಸಿದ ನಂತರ ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್[ಅ]ರ ಅಭಿಲಾಷೆಗಳ ಪ್ರಕಾರ ತ್ಯಾಗಗಳಲ್ಲಿ ಮುಂದಾಗುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಮ್ಮನ್ನು ಧನತ್ಯಾಗಗಳನ್ನೂ ಆಧ್ಯಾತ್ಮಿಕ ಸ್ಥಿತಿಗಳನ್ನೂ ಉತ್ತಮಗೊಳಿಸುತ್ತಾ ಹೋಗುವವರನ್ನಾಗಿ ಮಾಡಲಿ. ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸುವವರಾಗಲಿ. ಧನತ್ಯಾಗಗಳಲ್ಲಿ ಮಾತ್ರವಲ್ಲ, ಬದಲಾಗಿ ಪ್ರತಿಯೊಂದು ಸ್ಥಿತಿಯಲ್ಲಿ ಒಬ್ಬ ನೈಜ ಮುಸ್ಲಿಮನು ತೋರಿಸಬೇಕಾದ ಮಾದರಿಯನ್ನು ತೋರಿಸುವವರಾಗಲಿ. ಹಾಗೆ ಆದರೆ ನಾವು ಜಮಾಅತಿನ ಪ್ರಗತಿಗಳನ್ನು ಸಹ ನೋಡುವೆವು ಮತ್ತು ಮೊದಲಿಗಿಂತ ಹೆಚ್ಚಾಗಿ ನಾವು ಯಶಸ್ಸುಗಳನ್ನು ನೋಡುತ್ತಾ ಹೋಗುವೆವು – ಇನ್‌ಶಾ ಅಲ್ಲಾಹ್. ಅಲ್ಲಾಹನ ಅನುಗ್ರಹಗಳನ್ನು ನೋಡುತ್ತಾ ಹೋಗುವೆವು. ಶತ್ರುಗಳು ಪರಾಜಿತರಾಗುವುದನ್ನು ಕಾಣುತ್ತಾ ಹೋಗುವೆವು. ಆ ದಿನವನ್ನು ನಾವು ಬೇಗನೇ ನೋಡುವಂತಾಗಲಿ. ಧನತ್ಯಾಗಗಳನ್ನು ಮಾಡಿದ ಎಲ್ಲರಿಗೂ ಅಲ್ಲಾಹನು ಪ್ರತಿಫಲ ನೀಡಲಿ. ಅವರ ಸಂಪತ್ತು ಮತ್ತು ಕುಟುಂಬದಲ್ಲಿ ಅನುಗ್ರಹ ಸುರಿಸಲಿ. ಇನ್ನು ಮುಂದೆ ಸದಾ ಅವರು ಅತ್ಯುತ್ತಮ ರೀತಿಯಲ್ಲಿ ತಮ್ಮ ಜೀವಿತಗಳನ್ನು ಸಾಗಿಸುವವರಾಗಲಿ. ತಮ್ಮ ಮಕ್ಕಳಿಂದ ತಮ್ಮ ಸಂತಾನಗಳಿಂದ ಕಣ್ಣುಗಳಿಗೆ ತಂಪು ಪಡೆಯುವವರಾಗಲಿ. ಸ್ವತಃವೂ ಅಲ್ಲಾಹನ ಸಾಮೀಪ್ಯದಲ್ಲಿ ವರ್ಧಿಸುತ್ತಾ ಹೋಗುವವರಾಗಲಿ. ಅಲ್ಲಾಹನು ಹಾಗೆಯೇ ಆಗುವಂತೆ ಮಾಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
At, ***'Masjid Mubarak',*** *Islamabad, Tilford,* U.K. On 08-11-2024
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon